## 4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಪಿ.ಸಿ.ಆರ್ ನಂ. 3380/2025 ಸಿಡಬ್ಲ್ಯೂ - 2

ಸಾಕ್ಷಿದಾರರ ಹೆಸರು : ಅಖಿಲ್ ಸಿ.ಎಸ್.
ತಂದೆಯ ಹೆಸರು : ಚಂದ್ರಶೇಖರನ್
ವಯಸ್ಸು : 39 ವರ್ಷ
ವೃತ್ತಿ : ಎಂಪಿಯಾಲಿಜಿಸ್ಟ್
ವಾಸ : ಬೊಮ್ಮನಹಳ್ಳಿ, ಬೆಂಗಳೂರು

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಸ್ವ ಇಚ್ಛಾ ಹೇಳಿಕೆ** :

ಕಳೆದ 10 ವರ್ಷಗಳಿಂದ ನನಗೆ ದೂರುದಾರರ ಪರಿಚಯ ಇದೆ. ಇಂದಿರಾನಗರದ ಹಲಸೂರಿನಲ್ಲಿ ದೂರುದಾರರು ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆ. ಆರೋಪಿ ನನ್ನ ಆಸ್ಪತ್ರೆಗೆ ಕೆಲವು ಉಪಕರಣಗಳನ್ನು ಕಳುಹಿಸಿಕೊಟ್ಟ ಕಾರಣ ನನಗೆ ಕಳೆದ 05 ವರ್ಷಗಳಿಂದ ಆತ ಪರಿಚಯ ಇದ್ದಾರೆ. ದೂರುದಾರರು ಐ.ವಿ.ಎಫ್ ಯೂನಿಟ್ ತೆರೆಯುವ ಉದ್ದೇಶವನ್ನು ಹೊಂದಿದ್ದರು. ಆ ಸಮಯದಲ್ಲಿ ನಾನು ಆರೋಪಿಯನ್ನು ದೂರುದಾರರಿಗೆ ತಿಳಿಸಿರುತ್ತೇನೆ. ರೂ.62 ಲಕ್ಷ ನೀಡಿದರೆ ಐ.ವಿ.ಎಫ್ ಯೂನಿಟ್ ಅನ್ನು ತೆರೆಯುವುದಾಗಿ ಆರೋಪಿ ಒಪ್ಪಿಕೊಂಡಿರುತ್ತಾರೆ. 2023-24 ರಲ್ಲಿ ದೂರುದಾರರು ಸ್ವಲ್ಪ ಮುಂಗಡ ಹಣವನ್ನು ಆರೋಪಿಗೆ ಪಾವತಿಸಿರುತ್ತಾರೆ. ಆ ಸಮಯದಲ್ಲಿ ಆರೋಪಿ ರೂ.2 ಲಕ್ಷ ರಿಯಾಯಿತಿ ಕೊಟ್ಟು ಐ.ವಿ.ಎಫ್ ಯೂನಿಟ್ ಅನ್ನು ರೂ.60 ಲಕ್ಷದಲ್ಲಿ ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ದೂರುದಾರರು ಆರೋಪಿಗೆ 54 ಲಕ್ಷ ರೂಗಳನ್ನು ನೀಡಿರುತ್ತಾರೆ. ಆ ಹಣವನ್ನು ಪಡೆದುಕೊಂಡ ನಂತರ ಆರೋಪಿ ಐ.ವಿ.ಎಫ್ ಯೂನಿಟ್ ಅನ್ನು ತೆರೆಯಲು ವಿಳಂಬ ಮಾಡಿರುತ್ತಾರೆ ಮತ್ತು ಐ.ವಿ.ಎಫ್

ಯೂನಿಟ್ ಅನ್ನು ತೆರೆಯಲು ಬೇಕಾದ ಉಪಕರಣಗಳನ್ನು ಕಳುಹಿಸಿಕೊಟ್ಟಿಲ್ಲ. ಹಲವಾರು ಬಾರಿ ಮಾತುಕತೆಯಾದ ನಂತರ ಆರೋಪಿ ಹಳೆಯ ಉಪಕರಣಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಅದರಿಂದ ದೂರುದಾರರು ಐ.ವಿ.ಎಫ್ ಯೂನಿಟ್ ಅನ್ನು ತೆರೆಯಲು ಸಾಧ್ಯವಾಗದ ಕಾರಣ ಆ ಹಳೆಯ ಉಪಕರಣಗಳನ್ನು ವಾಪಸ್ಸು ಕಳುಹಿಸಿಕೊಟ್ಟಿರುತ್ತಾರೆ ಕಾರಣ ಅವುಗಳು ಉಪಯೋಗಿಸಲು ಯೋಗ್ಯವಾಗಿರಲಿಲ್ಲ. ಆದಾದ ನಂತರ ಆರೋಪಿ ಯಾವುದೇ ರೀತಿಯಲ್ಲೂ ಸ್ಪಂದಿಸುತ್ತಿರಲಿಲ್ಲ. ನಾನು ದೂರುದಾರರಿಗೆ ಆರೋಪಿಯನ್ನು ಸೂಚಿಸಿದವನಾದ ಕಾರಣ ನೇರವಾಗಿ ಆರೋಪಿಗೆ ಫೋನ್ ಮಾಡಿ ಕೇಳಲು ಪ್ರಯತ್ನಿಸಿರುತ್ತೇನೆ. ಆಗ ಆರೋಪಿ ಯಾವುದೇ ರೀತಿ ಸ್ಪಂದಿಸಿಲ್ಲ ಹಾಗೂ ದೂರುದಾರರು ಹಣವನ್ನು ವಾಪಸ್ಸು ಮಾಡಿಲ್ಲ.

(ಸಾಕ್ಷಿಯ ನೀಡಿದ ಹೇಳಿಕೆಯನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**